ಬಗರ್ ಹುಕುಂ ಸಾಗುವಳಿಯೆನ್ನು ಖಾಯಂಗೊಳಿಸುವ ಬಗ್ಗೆ.

೭೧೫. **ಶ್ರೀ ಕೆ. ಕುಶಾಲ (ಸುಳ್ಯ).**—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಾಂತ್ಯ ಬಡ ಹರಿಜನ ಗಿರಿಜನ ಆಗ್ಮೆದಾರರು ಆಗ್ಮೆದರಖಾಸ್ತು ಖಾಯಂ ಬಗ್ಗೆ ಮನವಿ ಸಲ್ಲಿಸಿ ಹಲವಾರು ಸೆಲ ಬೇಡಿಕೆಗಳನ್ನು ಈಡೇರಿಸುವಂತೆ ಕೇಳಿಕೊಂಡಿದ್ದರು, ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ) ಕಳೆದ ೨ ವರ್ಷಗಳಿಂದ ಈ ಬಡಜನರ ಆಗ್ಮೆಖಾಯಂ ಮಾಡಂತ್ತೇವೆ, ಶಾಸನ ತರುತ್ತೇವೆ ಎಂದರೂ ಈ ಕುರಿತು ಕ್ರಮಕೈಗೊಳ್ಳುವಂತೆ, ವಿಧಾನಸಭೆಯಲ್ಲಿ ಆಗ್ಮೆಖಾಯಂ ಬಗ್ಗೆ ಸಮಿತಿ ನೇಮಿಸಲಾಗಿತ್ತೇ, ಈ ಸಮಿತಿಯಂತೆ ಆಗ್ಮೆದಾರರ ಖಾಯಂ ದರಖಾಸ್ತು ಬಗ್ಗೆ ಸಮಿತಿಯು ಯಾವ ಹಂತದ ಕ್ರಮ ಕೈಕೊಂಡಿದೆ ?

ಇ) ಆಗ್ಮೆದಾರರ ದರಖಾಸ್ತು ಖಾಯಂ ಬಗ್ಗೆ ಸರ್ಕಾರದವರು ಏನು ಕ್ರಮ ಕೈಕೊಂಡಿದ್ದಾರೆ, ಹಾಗೂ ಸಮಿತಿಯ ವರದಿ ಯಾವ ಹಂತವನ್ನು ತಲುಪಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಸರ್ಕಾರವು ಆದೇಶ ಸಂಖ್ಯೆ ಆರ್. ಡಿ. ೧೦೫ ಎಲ್. ಜೆ. ಪಿ. ೭೭, ದಿನಾಂಕ ೧—೯—೧೯೭೭ ಮತ್ತು ಸಂಖ್ಯೆ ಆರ್. ಡಿ. ೨೭ ಎಲ್. ಜೆ. ಪಿ. ೮೧, ದಿನಾಂಕ ೨೭—೩—೮೧ ರಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿದ ಸರ್ಕಾರಿ ಜಮೀನನ್ನು ಅರ್ಹರಾದ ಭೂಹೀನ ಹರಿಜನ ಗಿರಿಜನರ ಪರವಾಗಿ ಸಕ್ರಮೀಕರಣಗೊಳಿಸುವ ಸಲುವಾಗಿ ಸರ್ಕಾರ ಸೂಕ್ತ ಕ್ರಮ ಕೈಕೊಂಡಿರುತ್ತದೆ. ಇಂಥವರು ದಿನಾಂಕ ೧೫—೮—೧೯೮೨ರ ಒಳಗೆ ಸಕ್ರಮೀಕರಣಗೊಳಿಸಲು ಅರ್ಜಿಗಳನ್ನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸಲ್ಲಿಸಲು ಸುತ್ತೋಲೆ ಸಂಖ್ಯೆ ಆರ್. ಡಿ. ೪೯ ಎಲ್. ಜೆ. ಪಿ. ೮೨, ದಿನಾಂಕ ೨—೬—೮೨ ರಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ಆ) ಆದರೆ ಇನ್ನೂ ಒತ್ತುವರಿ ಪ್ರಕಟಣೆಗಳು ನಡೆಯುತ್ತಾ ಬಂದು ಸಕ್ರಮೀಕರಣಗೊಳಿಸುವ ಪ್ರಶ್ನೆ ಉದ್ಭವಿಸಿರುವುದರಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜನರಲ್ಲಿನ ಅನಿಶ್ಚಿತತೆಯನ್ನು ಹೋಗಲಾಡಿಸಿ ಅಂಥವರು ಬೇಸಾಯ ಕಸಬನ್ನು ನಿಶ್ಚಿತ ರೀತಿಯಲ್ಲಿ ನಡೆಸಿಕೊಂಡು ಹೋಗಲು ಅನುವು ಆಗುವಂತೆ ಭೂಕಂದಾಯ ಅಧಿನಿಯಮ ೧೯೬೪ರ ಕಲಂ ೯೪ಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಅನುಕೂಲ ಮಾಡಿಕೊಡಲು ಸರ್ಕಾರ ತೀರ್ಮಾನಿಸಿದೆ. ಸರ್ಕಾರವು ಸದರಿ ತಿದ್ದುಪಡಿಯ ಕರಡು ಮಸೂದೆಯ ಪರಿಶೀಲನೆಗಾಗಿ ವಿಧಾನಮಂಡಲದ ಉಭಯ ಸದನಗಳ ಜಂಟಿ ಪರಿಶೀಲನಾ ಸಮಿತಿಯನ್ನು ನೇಮಿಸಲಾಗಿದೆ. ಈಗಾಗಲೇ ಸಾರ್ವಜನಿಕರಿಂದ ಈ ಬಗ್ಗೆ ವೈಯಕ್ತಿಕ ಅಭಿಪ್ರಾಯಗಳನ್ನು ಸದರಿ ಸಮಿತಿಯು ಸ್ವೀಕರಿಸಿದೆ. ಅವುಗಳನ್ನು ಪರಿಶೀಲಿಸಿ ಸೂಕ್ತ ವರದಿಯನ್ನು ೧೯೮೭ನೇ ವರ್ಷದ ಏಪ್ರಿಲ್ ತಿಂಗಳ ಒಳಗಡೆ ಸಲ್ಲಿಸಲು ಕಾಲಾವಕಾಶ ಪಡೆದಿದೆ.

ಇ) ಉಪ ಪ್ರಶ್ನೆ (ಅ) ಉತ್ತರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರೋಣ ನಗರದ ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡದ ಬಗ್ಗೆ.

೭೮೨ (ಉ). **ಶ್ರೀ ಜ್ಞಾನದೇವ ದೊಡ್ಡಮೇಟ್ಟಿ (ರೋಣ).**—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ನಗರಕ್ಕೆ ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ೧೯೮೩—೮೪ನೇ ಸಾಲಿನಲ್ಲಿ ಹಣ ಮಂಜೂರಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಕಟ್ಟಡ ನಿರ್ಮಾಣದ ವಿಳಂಬಕ್ಕೆ ಕಾರಣಗಳೇನು ?

ಇ) ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ?

ಶ್ರೀ ಜೆ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರೋಣ ನಗರದ ಪರಿಶಿಷ್ಟ ಜಾತಿ ಬಾಲಕಿಯರ ವಿದ್ಯಾರ್ಥಿನಿಲಯದ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ಪಹಿಸಲಾಗಿದ್ದು, ೧೯೮೬–೮೮ನೇ ಸಾಲಿನಲ್ಲಿ ನಿರ್ಮಾಣದ ಕಾರ್ಯಾದೇಶವನ್ನು ಕೈಗೊಳ್ಳಲಾಗುವುದು.

ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ನೋಂದಾವಣೆ ಶುಲ್ಕ

೫೨೧. ಶ್ರೀ ಆರ್. ವೆಂಕಟರಾವಮಯ್ಯ (ವಂಗಳಬಾಗಿಲು) .—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಶುಲ್ಕವೆಂದು ಸಾವಿರಕ್ಕೆ ೨೦ ರೂ.ಗಳಂತೆಯೂ ಮತ್ತು ಸ್ಟ್ಯಾಂಪ್ ಶುಲ್ಕವೆಂದು ೧೦ ಸಾವಿರದ ನಂತರ ಸಾವಿರಕ್ಕೆ ೩೫ ರೂ. ಗಳಂತೆಯೂ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕಾಯಿದೆಯಲ್ಲಿ ಈ ಬಗ್ಗೆಯ ವಸೂಲಾತಿಗೆ ಅವಕಾಶವಿಲ್ಲವಿರುವುದರಿಂದ ಸರ್ಕಾರದವರು ಈ ಬಗ್ಗೆ ಕೈಗೊಳ್ಳುವ ಕ್ರಮವೇನು ?

ಇ) ಸದರಿ ಕಛೇರಿಗಳಲ್ಲಿ ನೋಂದಣಿ ಶುಲ್ಕವೂ ಅತೀ ಹೆಚ್ಚಾಗುತ್ತಿದ್ದು ಬಡವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಶುಲ್ಕವನ್ನು ಕಡಿಮೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಸರ್ಕಾರದ ಅಧಿಸೂಚನೆ ಕ್ರಮ ಸಂಖ್ಯೆ ಆರ್. ಡಿ. ೪೦೩ ಇ. ಎಸ್. ಆರ್. ೮೫ ದಿನಾಂಕ ೨೭–೫–೮೬ರ ಅನ್ವಯ ನೋಂದಣಿ ಶುಲ್ಕ ಪ್ರತಿ ಸಾವಿರಕ್ಕೆ ರೂ. ೨೦ ರಂತೆ ದಿನಾಂಕ ೨–೬–೧೯೮೬ ರಿಂದ ವಸೂಲು ಮಾಡಲಾಗುತ್ತಿದೆ. ರೂ. ೧೦,೦೦೦–೦೦ ಮೀರಿದ ಸಾಲಕ್ಕೆ ಬರೆದುಕೊಡುವ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕ ಹಾಗೂ ಅಧಿಭಾರ ಶುಲ್ಕವೂ ಸೇರಿದಂತೆ ಪ್ರತಿ ಸಾವಿರಕ್ಕೆ ರೂ. ೨೫–೦೦ ರೂ. ೩೫–೦೦ ಹಾಗೂ ೪೫–೦೦ ರೂ.ಗಳಂತೆ ಅಧಿಭಾರವೂ ಆಯಾ ಸ್ಥಳಗಳಲ್ಲಿ ಜಾರಿ ಇರುವಂತೆ ಪ್ರತಿಶತ ೧, ೨ ಹಾಗೂ ೩ ಪ್ರಕಾರ ವಸೂಲಿ ಮಾಡಲಾಗುತ್ತಿದೆ.

ಆ) ಈ ಶುಲ್ಕವನ್ನು ಕಾನೂನು ರೀತಿ ವಸೂಲು ಮಾಡಲಾಗುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ನೋಂದಣಿ ಶುಲ್ಕವು ನ್ಯಾಯಬದ್ಧವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ '' ಇ '' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಕಟ್ಟಡ ಕುರಿತು.

೫೮೯. ಶ್ರೀ ನೀಲಕಂಠ ಗೌಡ್ರು (ಶಿಗ್ಗಾಂ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಶಿಗ್ಗಾಂ ತಾಲ್ಲೂಕು ದುಂದಶಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಕಟ್ಟುವ ವಿಚಾರವೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಎಂದು ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು,